# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ "ಆಮೂಲಾಗ್ರ ಸುಧಾರಣೆ"- ೨

ಎಚ್.ಎನ್. ಸೋಮಸುಂದರಂ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)


## ಆಮೂಲಾಗ್ರ ಸುಧಾರಣೆ

ಸ್ವಾಮಿ ವಿವೇಕಾನಂದರ ವಿಚಾರಧಾರೆ ಎಷ್ಟು ಸ್ಪಷ್ಟ ಮತ್ತು ಸುಂದರವೋ ಅವರು ಬಳಸುವ ಪದಗಳೂ ಅಷ್ಟೇ ಅಮೋಘ. 'ಆಮೂಲಾಗ್ರ ಸುಧಾರಣೆ'ಯೆಂದರೆ ಸಮಸ್ಯೆಯನ್ನು ಸಮಷ್ಟಿಯಲ್ಲಿ ನೋಡಿ ನಿಖರವಾದ ಮೂಲ ಸಮಸ್ಯೆಯನ್ನು ಗುರುತಿಸುವುದು. ಅದು ಇನ್ನೂ ಬೇರುಬಿಟ್ಟಿರುವ ಇತರೆ ಮೂಲಗಳನ್ನು, ವ್ಯಾಪಕವಾಗಿ ಹರಡಿರುವ ರೆಂಬೆ ಕೊಂಬೆ ಟೊಂಗೆ ಟಿಸಿಲು ಜಾಲವನ್ನು ಪತ್ತೆ ಹಚ್ಚುವುದು. ರೋಗನಿದಾನ ಬಲ್ಲ ನುರಿತ ವೈದ್ಯನಂತೆ ಸಮಸ್ಯೆಯ ಆಮೂಲಾಗ್ರವನ್ನು ಬಲ್ಲ ಸುಧಾರಕನು ಪರಿಹಾರದ ಹಾದಿಯಲ್ಲಿ ನಡೆಯುತ್ತಾನೆ. ಸಮಸ್ಯೆಗಳಿಗೆ ಎರಡು ಬಗೆಯ ಪರಿಹಾರ ಬೇಕಾಗುತ್ತದೆ. ಒಂದು ತಕ್ಷಣದ, ಅಲ್ಪಕಾಲಿಕ ಉತ್ತರ; ಎರಡನೆಯದು ದೀರ್ಘಕಾಲಿಕ ಶಾಶ್ವತ ಪರಿಹಾರ. ಈ ದೀರ್ಘಕಾಲಿಕ ಶಾಶ್ವತ ಪರಿಹಾರ ಮಾಡದಿದ್ದರೆ ಮರುಕಳಿಸುವ ಕೆಟ್ಟ ರೋಗದಂತೆ ಸಮಸ್ಯೆಯು ಮತ್ತೆ ಮತ್ತೆ ಹೆಡೆ ಎತ್ತುವುದು. ಅಲ್ಪಕಾಲಿಕ ಪರಿಹಾರವನ್ನು ಕಾನೂನು ಕಟ್ಟಳೆಗಳಿಂದ, ಶಿಸ್ತಿನ ಪ್ರಯೋಗದಿಂದ ಮಾಡಬಹುದು; ಆದರೆ ಶಾಶ್ವತ ಪರಿಹಾರವನ್ನು ಶಿಕ್ಷಣದಿಂದ, ಮನಃಪರಿವರ್ತನೆಯಿಂದ, ಜೀವನದ ನಿಲುವುಗಳ ಬದಲಾವಣೆಯಿಂದ ಮಾಡಬೇಕಾಗುತ್ತದೆ.

## ವಿದ್ಯಾಭ್ಯಾಸ

ಸ್ವಾಮಿ ವಿವೇಕಾನಂದರ ಕಾಲದಲ್ಲಿ ವಿದ್ಯಾಭ್ಯಾಸ ಅತ್ಯಂತ ಕೆಳಮಟ್ಟದಲ್ಲಿ ಇತ್ತೆಂದೇ ಹೇಳಬಹುದು. ಅಂದು ಉಚ್ಚ ವರ್ಗದವರು ಮತ್ತು ಧನಿಕರು ಮಾತ್ರ ವಿದ್ಯಾಭ್ಯಾಸ ಪಡೆಯಲು ಸಾಧ್ಯವಿತ್ತು. ಅದೂ ಪಾಶ್ಚಿಮಾತ್ಯ ಹಿನ್ನೆಲೆಯ ವಿದ್ಯೆ. ಮಹಿಳೆಯರನ್ನು, ಜನಸಾಮಾನ್ಯರನ್ನು, ದೀನದಲಿತರನ್ನಂತೂ ಕೇಳುವವರೇ ಇರಲಿಲ್ಲ. ಗ್ರಾಮೀಣ ಭಾರತವಂತೂ ವಿದ್ಯಾಭ್ಯಾಸದಿಂದ ಪೂರ್ಣವಾಗಿಯೇ ವಂಚಿತವಾಗಿತ್ತು.

ಯಾವ ವಿದ್ಯಾಭ್ಯಾಸದಿಂದ ಮಾನವನಲ್ಲಿರುವ ಪರಿಪೂರ್ಣತೆಯ ಪ್ರಕಾಶನವಾಗುವುದೋ ಅದು ಮಾತ್ರ ನಿಜವಾದ ವಿದ್ಯಾಭ್ಯಾಸವೆಂದೂ, ಅದು ವಿಶ್ವದೆಲ್ಲೆಡೆ ಎಲ್ಲರಿಗೂ ಸಿಕ್ಕಬೇಕೆಂದೂ ವಿವೇಕಾನಂದರು ತಿಳಿದಿದ್ದರು. ಭಾರತದ ಪುನರುಜ್ಜೀವನಕ್ಕೆ ವಿದ್ಯಾಭ್ಯಾಸವು ಅನಿವಾರ್ಯವೆಂದು



ವಿವೇಕಾನಂದರು ನಂಬಿದ್ದರು. ಭಾರತದ ವಿಚಾರದಲ್ಲಿ ಪಾಶ್ಚಿಮಾತ್ಯ ಶೈಲಿಯ ಶಿಕ್ಷಣವನ್ನು ಬಲವಂತವಾಗಿ ಹೇರುವಾಗ ವಿದ್ಯಾರ್ಥಿಗಳ ಆತ್ಮಶ್ರದ್ಧೆ ನಾಶವಾಗುತ್ತಿರುವುದನ್ನು ಅವರು ಗುರುತಿಸಿದ್ದರು. ಬ್ರಿಟಿಷರು ತಮಗಾಗಿ ಕಾರಕೂನರನ್ನು ತಯಾರಿ ಮಾಡಲು ರೂಪಿಸಿರುವ ಅಂದಿನ ಕ್ರಮವು ಶಿಕ್ಷಣವೇ ಅಲ್ಲವೆಂದು ವಿವೇಕಾನಂದರು ಸಾರಿದರು. ನಮಗೆ ಬೇಕಾದ ನಿಜವಾದ ವಿದ್ಯಾಭ್ಯಾಸವನ್ನು ಅವರು ಈ ರೀತಿ ವಿವರಿಸಿದರು:

"ಯಾವ ವಿದ್ಯೆಯಿಂದ ಶೀಲ ನಿರ್ಮಾಣವಾಗುವುದೋ, ಮನೋಶಕ್ತಿ ಹೆಚ್ಚಿ, ಬುದ್ಧಿ ವಿಕಾಸವಾಗುವುದೋ ಮತ್ತು ಮನುಷ್ಯನು ತನ್ನ ಕಾಲಮೇಲೆ ತಾನು ನಿಲ್ಲುವಂತೆ ಮಾಡುವುದೋ ಅಂತಹ ವಿದ್ಯೆ ನಮಗೆ ಬೇಕು. ವಿದೇಶಿ ಹತೋಟಿಯಿಂದ ಮುಕ್ತವಾದ ವಿದ್ಯಾಭ್ಯಾಸ ರೂಪಿಸಿಕೊಂಡು ಅದರಲ್ಲಿ ನಮ್ಮ ದೇಶದ ಜ್ಞಾನದ ವಿವಿಧ ಶಾಖೆಗಳನ್ನು, ಇಂಗ್ಲಿಷ್ ಬಾಷೆಯನ್ನು, ಪಾಶ್ಚಾತ್ಯ ವಿಜ್ಞಾನವನ್ನು ನಾವು ಓದಬೇಕು. ತಾಂತ್ರಿಕ ವಿದ್ಯಾಭ್ಯಾಸ ಮತ್ತು ಅದರೊಡನೆ ಉದ್ಯಮಗಳಲ್ಲಿ ಬಳಸುವ ಇನ್ನಿತರ ವಿಷಯಗಳನ್ನು ಕಲಿತು ಕಷ್ಟ ದಿನಗಳಲ್ಲಿಯೂ ಸಾಕಷ್ಟು ಆದಾಯ ಪಡೆಯುವಂತಾಗಬೇಕು. ಜನಕೋಟಿಯ ನಿತ್ಯ ಜೀವನ ಹೋರಾಟಕ್ಕೆ ಸಹಾಯಮಾಡದ, ಶೀಲ ಸಾಮರ್ಥ್ಯ ರೂಪಿಸದ, ಔದಾರ್ಯದ ಮನಸ್ಸನ್ನು ಉಂಟುಮಾಡದ, ಸಿಂಹದ ಧೈರ್ಯ ತುಂಬದ ವಿದ್ಯೆ ಅದರ ಹೆಸರಿಗೆ ಯೋಗ್ಯವೇ? "ಕಾಯಾ-ವಾಚಾ-ಮನಸಾ ಪರಿಶುದ್ಧವಾಗಿರುವುದೇ ಬ್ರಹ್ಮಚರ್ಯ. ವಿದ್ಯಾರ್ಥಿಗೆ ಬ್ರಹ್ಮಚರ್ಯ, ಶ್ರದ್ಧೆ ಮತ್ತು ಏಕಾಗ್ರತೆ ಬೇಕು".

ವಿದ್ಯಾಭ್ಯಾಸದಿಂದ ಶೀಲ ರೂಪುಗೊಂಡು ನಂತರ ವ್ಯಕ್ತಿತ್ವ ನಿರ್ಮಾಣವಾಗುವುದು ಎಂದು ವಿವೇಕಾನಂದರು ನುಡಿಯುತ್ತಾರೆ. ಪರಿಪೂರ್ಣ ವ್ಯಕ್ತಿತ್ವವಾಗುವುದೇ ವಿದ್ಯಾಭ್ಯಾಸದ ಗುರಿ.

ಮಹಿಳೆಯರಿಗೆ ಅನೇಕ ಸಮಸ್ಯೆಗಳಿವೆ, ಆದರೆ ಆ ಒಂದು ಮಾಂತ್ರಿಕ ಪದ–ವಿದ್ಯಾಭ್ಯಾಸ–ದಿಂದ ಪರಿಹಾರವಾಗದಿರುವುದು ಯಾವುದೂ ಇಲ್ಲ ಎನ್ನುತ್ತಾರೆ. ಅವರಲ್ಲಿ ಕೆಲವರು ಬ್ರಹ್ಮಚಾರಿಣಿಯರಾಗಿಯೇ ಉಳಿಯಲು ಇಷ್ಟಪಟ್ಟರೆ ಇರಬಹುದು ಎಂದು ಹೇಳುವ ವಿವೇಕಾನಂದರು ಮಹಿಳೆಯರಿಗೆ 'ಸ್ವರಕ್ಷಣೆ' ತಂತ್ರಗಳನ್ನೂ ಕಲಿಸಬೇಕೆಂದು ಹೇಳುವಾಗ, ಒಂದು ಶತಮಾನಕ್ಕೂ ಹಿಂದಿನ ಕಾಲದಲ್ಲಿಯೇ ಎಷ್ಟು ಆಳವಾಗಿ ಅವರು ಚಿಂತನೆ ನಡೆಸಿದ್ದರೆಂಬುದು ಅರ್ಥವಾಗುತ್ತದೆ.

ಜನಸಮುದಾಯವನ್ನು ಕಡೆಗಣಿಸಿದುದು ಒಂದು 'ರಾಷ್ಟ್ರೀಯ ಪಾಪ' ಎನ್ನುವ ವಿವೇಕಾನಂದರು, ವಿದ್ಯಾವಂತರು ಮಾಡಬೇಕಾದ ಕೆಲಸವನ್ನು ಹೀಗೆ ವಿವರಿಸುತ್ತಾರೆ: "ದೇಶ ಗುಡಿಸಿಲಿನಲ್ಲಿ ವಾಸಿಸುತ್ತಿದೆ. ಮಹಮ್ಮದನು ಬೆಟ್ಟಕ್ಕೆ ಬರಲಾಗದಿದ್ದರೆ ಬೆಟ್ಟವೇ ಅವನ ಬಳಿ ಹೋಗಲಿ. ಬಡವರು ಪಾಠಶಾಲೆಗಳಿಗೆ ಬರಲಾರರು. ವಿದ್ಯಾವಂತರೇ ಅಲ್ಲಿಗೆ ಹೋಗಿ ಅರಿವನ್ನು ಉಂಟುಮಾಡಲಿ. ಎಲ್ಲಿಯವರೆಗೆ ಲಕ್ಷ ಲಕ್ಷ ಜನರು ಹಸಿವು ಅಜ್ಞಾನದಿಂದ ಬಾಳುತ್ತಿರುವರೋ, ಯಾರು ಅವರ ಸಹಾಯದಿಂದಲೇ ವಿದ್ಯಾವಂತನಾಗಿ ಅವರಿಗೇ ಗಮನ ಕೊಡುವುದಿಲ್ಲವೋ ಅಂತಹವನನ್ನು ನಾನು ದ್ರೋಹಿ ಎಂದು ಕರೆಯುತ್ತೇನೆ."

ಮೇಲಿನ ಚರ್ಚೆಯಿಂದ ವಿವೇಕಾನಂದರು ವಿದ್ಯಾಭ್ಯಾಸದ ಮೂಲಕ ಸಮಾಜವನ್ನು ಸುಧಾರಿಸುವ ವಿಷಯದಲ್ಲಿ ಎಷ್ಟು ಗಾಢವಾದ ಮತ್ತು ಅನುಷ್ಠಾನಯೋಗ್ಯವಾದ ಚಿಂತನೆ ನಡೆಸಿರುವರೆಂಬುದನ್ನು ಕಾಣಬಹುದು. ಇಂದು ವಿದ್ಯಾಭ್ಯಾಸದ ಕ್ಷೇತ್ರದಲ್ಲಿ ಸ್ವಾಮಿ ವಿವೇಕಾನಂದರ ವಿಚಾರಧಾರೆಯು ಮಹತ್ವದ್ದಾಗಿ ಪರಿಗಣಿಸಲ್ಪಟ್ಟದ್ದು ಸ್ವೀಕೃತವಾಗುತ್ತಿರುವುದು ಒಂದು ಒಳ್ಳೆಯ ಬೆಳವಣಿಗೆ.

### ಶಾಶ್ವತ ಪರಿಹಾರ

ಅಲ್ಪ ಕಾಲಾವಧಿ ಕ್ರಿಯೆಯು ಕಾನೂನಿನ ಕ್ರಮವಾದರೆ, ಶಾಶ್ವತ ಪರಿಹಾರವು, ದೀರ್ಘಕಾಲಿಕವಾಗಿದ್ದು, ಸಮಾಜದ ನಿಲುವಿನ ಬದಲಾವಣೆಯೇ ಆಗಿರುತ್ತದೆ. ಒಳ್ಳೆಯ ಜೀವನಕ್ಕೆ ಪ್ರಾಥಮಿಕ ವಿದ್ಯಾಭ್ಯಾಸದಿಂದಲೇ ಬುನಾದಿ ಹಾಕಿದರೆ, ಅಂತಹ ಪಾಠಗಳು ಎಲ್ಲ ತರಗತಿಗಳಲ್ಲಿಯೂ ಇದ್ದರೆ, ಮೌಲ್ಯಾಧಾರಿತ ನೈತಿಕ ಶಿಕ್ಷಣಕ್ಕೆ ಆದ್ಯತೆ ನೀಡಿದ್ದೇ ಆದರೆ, ಈ ದೆಸೆಯಲ್ಲಿ ಪ್ರಗತಿಯಾಗಬಹುದು. ಹಾಗೆಯೇ ಸಂವೇದನಾಶೀಲತೆಯನ್ನು ಹೋಗಲಾಡಿಸುವ ಅತೀವ ಸ್ಪರ್ಧೆ, ಅವಕಾಶ ವಂಚನೆ, ಒತ್ತಡಗಳನ್ನು ಆಮೂಲಾಗ್ರ ಸುಧಾರಣೆ ಗಮನಿಸುತ್ತದೆ.

ಆಮೂಲಾಗ್ರ ಸುಧಾರಣೆ ಏಕಾಂತತೆಯಲ್ಲಿ ನಡೆಯುವುದಲ್ಲ. ಅದಕ್ಕೆ ಪ್ರತ್ಯಕ್ಷವಾಗಿ ಸಂಬಂಧಪಟ್ಟ ಎಲ್ಲ ವಿಷಯವನ್ನು, ಅದರೊಡನೆ ಪರೋಕ್ಷವಾಗಿ ಸಂಬಂಧಿಸಿದ ಇನ್ನಿತರ ಸಮಸ್ಯೆಗಳನ್ನು ಆಮೂಲಾಗ್ರ ಸುಧಾರಣೆಯು ಗಮನಿಸುತ್ತದೆ. ಇದರೊಡನೆ ಆಮೂಲಾಗ್ರ ಸುಧಾರಣೆಯು ಫಲಿತಾಂಶದಾಯಕವೂ, ಸಂಬಂಧಿತ ಸಂಸ್ಕೃತಿಸಂವೇದಿಯೂ, ಪರಿಸರಸ್ನೇಹಿಯೂ, ಸರ್ವೋದಯಕಾರಕವೂ ಆಗಿರುತ್ತದೆ, ಇನ್ನೂ ಅನೇಕ ಇದೇ ರೀತಿಯ ಸಮಸ್ಯೆಗಳೂ ಪರಿಹಾರವಾಗಿರುತ್ತವೆ. ಆಮೂಲಾಗ್ರ ಸುಧಾರಣೆ ಸಣ್ಣ ಸಣ್ಣ ವಿಚಾರಗಳನ್ನು ಸಹ ಗಂಭೀರವಾಗಿ ಗಮನಿಸುತ್ತದೆ. "ಸಣ್ಣ ವಿಚಾರಗಳು ಪರಿಪೂರ್ಣತೆ ಕೊಡುವುವು; ಆದರೆ ಪರಿಪೂರ್ಣತೆ ಸಣ್ಣ ವಿಚಾರವಲ್ಲ" ಎಂಬ ನುಡಿಯಿದೆ. ಒಂದೊಂದೆ ಸಣ್ಣ ಅಥವಾ ದೊಡ್ಡ ವಿಚಾರವನ್ನು ಚೆನ್ನಾಗಿ ಪರಿಹರಿಸಿದರೆ ಒಟ್ಟು ಪರಿಹಾರ ನಿಜವಾಗಿ ಚೆನ್ನಾಗಿರುವುದು. ಆಮೂಲಾಗ್ರ ಸುಧಾರಣೆಗೆ ಕಾಲಪ್ರಜ್ಞೆಯೂ ಅತಿ ಆವಶ್ಯಕ. ಯೋಜಿತ ಅಭಿವೃದ್ಧಿಯು 'ನಿಲ್ಲುವ, ತಾಳಿಕೊಳ್ಳುವ ಅಭಿವೃದ್ಧಿ'ಯಾಗಿರಬೇಕು. ತಾತ್ಕಾಲಿಕವಾಗಿ ಸಮಸ್ಯೆ ಬಗೆಹರಿಯುವಂತೆ ಕಂಡು ಮುಂದಿನ ಪೀಳಿಗೆ ಆ ಸಮಸ್ಯೆಗಳು ಉಲ್ಬಣಗೊಂಡ ಪರಿಸ್ಥಿತಿಯಿಂದ ಪೀಡಿತರಾಗಬಾರದು.

ಸ್ವಾಮಿ ವಿವೇಕಾನಂದರ ಈ ವಾಣಿ ನಮ್ಮ ಸ್ಮೃತಿಯಲ್ಲಿರಲಿ: "ಮಹತ್ಕಾರ್ಯ ಸಾಧನೆಗೆ ಮೂರು ವಿಷಯಗಳು ಅತ್ಯಾವಶ್ಯಕ. ಮೊದಲನೆಯದೇ ಹೃದಯವಂತಿಕೆ. ಬುದ್ಧಿಯಲ್ಲಿ ಮತ್ತು ವಿಚಾರ ಶಕ್ತಿಯಲ್ಲಿ ಏನಿದೆ? ಕೆಲವು ಹೆಜ್ಜೆಗಳು ಹೋಗಿ ಅಲ್ಲಿ ನಿಲ್ಲುವುವು. ಸ್ಫೂರ್ತಿ ಬರುವುದು ಹೃದಯದಿಂದ. ಪ್ರೇಮವು ಅಸಾಧ್ಯವಾದ ಬಾಗಿಲನ್ನೂ ತೆರೆಯುವುದು. ಪ್ರಪಂಚದ ರಹಸ್ಯಕ್ಕೆಲ್ಲಾ ಪ್ರೇಮವೇ ಬಾಗಿಲು. ಭಾವೀ ದೇಶಭಕ್ತರೇ, ಸಮಾಜ ಸುಧಾರಕರೇ, ಮೊದಲು ದೇಶಭಕ್ತಿಯನ್ನು ಹೃದಯದಲ್ಲಿ ಅನುಭವಿಸಿ. ಇದರಿಂದ ನೀವು ಅಶಾಂತರಾಗಿದ್ದೀರಾ? ಇದರಿಂದ ನಿಮ್ಮ ನಿದ್ರೆಗೆ ಭಂಗ ಬಂದಿದೆಯೆ? ಇದು ನಿಮ್ಮ ರಕ್ತದಲ್ಲಿ ವ್ಯಾಪಿಸಿದೆಯೆ? ನಾಡಿಯಲ್ಲಿ ಸಂಚರಿಸಿ ನಿಮ್ಮ ಹೃದಯ ಚಲನೆಯೊಂದಿಗೆ ಸ್ಪಂದಿಸುತ್ತಿದೆಯೆ?

"ನೀವು ಹೃದಯದಲ್ಲಿ ಅನುಭವಿಸಬಹುದು. ಈ ಉದ್ವೇಗವನ್ನು ಬರಿಯ ಬಾಯಿಮಾತಿನಲ್ಲಿ ವ್ಯರ್ಥಗೊಳಿಸದೆ, ಈ ಸಮಸ್ಯೆಯಿಂದ ಪಾರಾಗುವುದಕ್ಕೆ ಯಾವುದಾದರೊಂದು ಮಾರ್ಗವನ್ನು ಕಂಡುಹಿಡಿದಿರುವಿರಾ? ಅವರನ್ನು ದೂರದೆ ಸಹಾಯವನ್ನು ನೀಡುವ, ವರ್ತಮಾನ ಮೃತ್ಯುಸ್ಥಿತಿಯಿಂದ ಅವರನ್ನು ಮೇಲೆತ್ತಿ ಅವರ ದುಃಖವನ್ನು ಶಮನಗೊಳಿಸುವ ಸಹಾನುಭೂತಿಯ ನುಡಿಯನ್ನು ಉಚ್ಚರಿಸಬಲ್ಲಿರಾ?

"ಇಷ್ಟೇ ಅಲ್ಲ. ಪರ್ವತೋಪಮ ಆತಂಕಗಳನ್ನು ದಾಟಬಲ್ಲ

ಇಚ್ಛಾಶಕ್ತಿ ನಿಮ್ಮಲ್ಲಿದೆಯೆ? ಇಡೀ ಪ್ರಪಂಚವೇ ಕತ್ತಿಯನ್ನು ಹಿರಿದು ನಿಮ್ಮನ್ನು ಎದುರಿಸಿದರೂ, ಸರಿ ಎಂದು ತೋರಿದು ದನ್ನು ಮಾಡುವ ಧೈರ್ಯ ನಿಮ್ಮಲ್ಲಿದೆಯೆ? ನಿಮ್ಮ ಹೆಂಡತಿ ಮಕ್ಕಳು ಅವನ್ನು ವಿರೋಧಿಸಿದರೂ, ನಿಮ್ಮ ದ್ರವ್ಯ ಹೋದರೂ, ಕೀರ್ತಿ ನಶಿಸಿದರೂ, ಐಶ್ವರ್ಯ ಮಾಯವಾದರೂ, ನೀವು ಅದನ್ನು ಬಿಡದೆ ಇರಬಲ್ಲಿರಾ? ಅದನ್ನೇ ಹಿಂಬಾಲಿಸುತ್ತಾ ಎಡೆಬಿಡದೆ ಗುರಿಯೆಡೆಗೆ ಧಾವಿಸಬಲ್ಲಿರಾ?

"ನಿಮ್ಮಲ್ಲಿ ಈ ಮೂರು ಗುಣಗಳಿದ್ದರೆ ಪ್ರತಿಯೊಬ್ಬರೂ ಮಹಾ ಅದ್ಭುತ ಕಾರ್ಯವನ್ನು ಸಾಧಿಸಬಲ್ಲಿರಿ."

## ಕೇಳಿ ತಿಳಿಯಿರಿ

[ಈ ಬಾರಿ ಸಾಧಕರ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಿರುವವರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾಗಿರುವ ಸ್ವಾಮಿ ನಿತ್ಯಸ್ಥಾನಂದರು. ಓದುಗರು ತಮ್ಮ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಸ್ಫುಟವಾಗಿ ಕೆಲವೇ ವಾಕ್ಯಗಳಲ್ಲಿ ಬರೆದು ಈ ಪತ್ರಿಕೆಯ ವಿಳಾಸಕ್ಕೆ ಕಳುಹಿಸಬಹುದು.]

**ಸಮಯವನ್ನು ಹೇಗೆ ನಿರ್ವಹಿಸುವುದು? ಕೆಲಸದ ಒತ್ತಡದ ಮಧ್ಯೆ ಯಾವ ನಿಯಮವನ್ನು ಅನುಸರಿಸಿ ಸಮಯವನ್ನು ವಿಂಗಡಿಸಿ ಕೊಳ್ಳಬೇಕು?**

ಸಮಯ ನಿರ್ವಹಣೆ ಒಂದು ಕಲೆ. ನಿರ್ದಿಷ್ಟ ದಿನಚರಿಯನ್ನು ಹಾಕಿಕೊಂಡು ದೃಢನಿಶ್ಚಯದಿಂದ ಅದಕ್ಕನುಗುಣವಾಗಿ ನಮ್ಮ ದಿನನಿತ್ಯದ ಆಗುಹೋಗುಗಳನ್ನು ನಿರ್ವಹಿಸಿದರೆ, ಆಗ ನಮಗೆ ಎಲ್ಲದಕ್ಕೂ ಸಾಕಷ್ಟು ಸಮಯ ದೊರೆಯುತ್ತದೆ. ಕೆಲಸವನ್ನು ಅತ್ಯಂತ ಶಿಸ್ತಿನಿಂದ ಮಾಡುವುದರಿಂದಲೂ, ತ್ವರಿತವಾಗಿ ಮಾಡುವುದರಿಂದಲೂ ಎಷ್ಟೋ ಸಮಯ ಉಳಿತಾಯವಾಗುತ್ತದೆ. ನಮಗೆ ಅರಿವಿಲ್ಲದೆ ಎಷ್ಟೋ ಸಮಯ ವ್ಯರ್ಥವಾಗುತ್ತದೆ, ಮರೆಯುವುದರಿಂದಲೂ ಸಮಯ ವ್ಯರ್ಥವಾಗುತ್ತದೆ. ನಾವು ಹೆಚ್ಚು ಎಚ್ಚರಿಕೆಯಿಂದ ಅರಿವಿನಿಂದ ಕೆಲಸ ಮಾಡಿದರೆ ಹೆಚ್ಚು ಕೆಲಸವನ್ನು ಅಲ್ಪ ಸಮಯ ದಲ್ಲಿ ಮಾಡಲು ಸಾಧ್ಯ. ಅನವಶ್ಯಕ ಚಲನೆ, ಮಾತು ಮುಂತಾದ ವುಗಳ ಮೂಲಕ ಸಮಯ ಪೋಲಾಗುವುದನ್ನು ನಿಲ್ಲಿಸಬೇಕು. ಒಟ್ಟಿನಲ್ಲಿ ಹೇಳುವುದಾದರೆ, Time management depends upon self-management —ವ್ಯಕ್ತಿಗೆ ಸರಿಯಾದ ರೀತಿಯಲ್ಲಿ ತನ್ನನ್ನು ನಿರ್ವಹಿಸಿಕೊಳ್ಳಲು ಸಾಧ್ಯವಾದರೆ ಸಮಯ ನಿರ್ವಹಣೆಯೂ ಸಾಧ್ಯವಾಗುತ್ತದೆ.

**ನಮ್ಮ ತಪ್ಪೇ ಇಲ್ಲದೆ ಇದ್ದರೂ ಕೆಲವರು ದೋಷಾರೋಪ ಮಾಡಿ, ದ್ವೇಷ ಕಾರುತ್ತಾರೆ, ಕೋಪ ವ್ಯಕ್ತಪಡಿಸುತ್ತಾರೆ. ಅಂತಹ ಸಂದರ್ಭ ಗಳನ್ನು ಎದುರಿಸುವುದು ಹೇಗೆ?**

ಜನರ ಸ್ವಭಾವವನ್ನು ಬದಲಾಯಿಸಲಾಗುವುದಿಲ್ಲ. ನಿಂದಕರು ಈ ಪ್ರಪಂಚದಲ್ಲಿ ಇದ್ದೇ ಇರುತ್ತಾರೆ. ಅವರು ನಮ್ಮ ಮನಶ್ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಸಹಾಯ ಮಾಡುತ್ತಾರೆ. ಸುತ್ತಿಗೆಯ ಪೆಟ್ಟು ಬಲವಾದಷ್ಟೂ ಚಿನ್ನ ಹೆಚ್ಚು ಹದವಾಗುತ್ತದೆ. ಒಂದು ಸಾಮಾನ್ಯ ಕಲ್ಲು ಸುಂದರ ವಿಗ್ರಹವಾಗುವುದು ಉಳಿಯ ಹೊಡೆತದಿಂದ. ಆದ್ದ ರಿಂದ ತಾಳ್ಮೆ ಅತ್ಯಂತ ಮುಖ್ಯ. ಜನರು ನಮ್ಮ ಮೇಲೆ ಕೋಪ ಮಾಡಿಕೊಳ್ಳುತ್ತಾರೆ ಎಂದು ನಾವೂ ಕೋಪಗೊಂಡರೆ ಅದರಿಂದ ನಮಗೇ ಹಾನಿ; ಅವರ ತಪ್ಪಿಗೆ ನಾವು ಶಿಕ್ಷೆ ಅನುಭವಿಸಿದಂತೆ. ಇತರರು ನಮ್ಮ ಮೇಲೆ ದೋಷಾರೋಪಣೆ ಮಾಡಿದಾಗ, ನಮ್ಮ ಕಡೆಗೇ ನಾವು ಗಮನ ಹರಿಸಿ, ನಮ್ಮಲ್ಲಿರಬಹುದಾದ ದೋಷಗಳನ್ನು ಗುರುತಿಸಿ ಅವುಗಳಿಂದ ಮುಕ್ತರಾಗಲು ನಾವು ಪ್ರಯತ್ನಿಸಬೇಕು. ನಮ್ಮನ್ನು ದ್ವೇಷಿಸುವವರನ್ನೂ ಪ್ರೀತಿಸಲು ಪ್ರಯತ್ನಿಸಬೇಕು, ಅವರ ಒಳಿತಿಗಾಗಿ ಪ್ರಾರ್ಥಿಸಬೇಕು. ಎಲ್ಲ ಮಹಾತ್ಮರೂ ಹೇಳುವಂತೆ, ದ್ವೇಷವನ್ನು ದ್ವೇಷದಿಂದ ಗೆಲ್ಲಲು ಸಾಧ್ಯವಿಲ್ಲ, ಪ್ರೀತಿಯಿಂದ ಗೆಲ್ಲ ಬಹುದು. ಆದರೆ ಅಪಾರ ತಾಳ್ಮೆ ಆವಶ್ಯಕ. ಕೆಲವೊಮ್ಮೆ ಪ್ರತಿಕ್ರಿಯೆ ತೋರಿಸಬೇಕಾದರೂ ಅದರ ಹಿಂದೆ ದ್ವೇಷ ಇಲ್ಲದಿರಲಿ. ಶ್ರೀರಾಮ ಕೃಷ್ಣರು ಹೇಳುವಂತೆ, ಬುಸುಗುಟ್ಟಬೇಕು, ಆದರೆ ವಿಷ ಕಾರಬಾರದು.

**ಇಂದಿನ ಜಾಗತಿಕ ಪ್ರಪಂಚದಲ್ಲಿ ಇತರ ದೇಶ, ಸಂಸ್ಕೃತಿಯವರೊಡನೆ ವ್ಯವಹರಿಸಬೇಕಾಗುತ್ತದೆ. ಹೀಗೆ ವ್ಯವಹರಿಸುವಾಗ ಅನೇಕ barriers ಮಧ್ಯೆ ಒಂದು ನೇರವಾದ ಸಂಪರ್ಕ ಸಾಧ್ಯವೇ ಇಲ್ಲ ಎನ್ನು ವಂತಾಗುತ್ತದೆ. ಇದಕ್ಕೆ ಪರಿಹಾರವೇನು?**

ನಮ್ಮಲ್ಲಿ ವಿಶಾಲ ಮನೋಭಾವ ಇರಬೇಕು, ಸ್ವೀಕರಿಸುವ ಮನೋಭಾವ ಇರಬೇಕು. ಶ್ರೀಮಾತೆ ಶಾರದಾದೇವಿಯವರು ಹೇಳು ವಂತೆ, 'ಎಲ್ಲರನ್ನೂ ನಿನ್ನವರನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸು. ಯಾರೂ ಪರರಲ್ಲ.' ಎಲ್ಲ ಜನಾಂಗದವರಲ್ಲಿಯೂ ಸಂಸ್ಕೃತಿ ಯಲ್ಲಿಯೂ ಒಳಿತುಗಳಿರುತ್ತವೆ, ಅವನ್ನು ಗುರುತಿಸುವ ಸಾಮರ್ಥ್ಯ ನಮಗಿರಬೇಕು.

ಅನೇಕ ವರ್ಷ ಒಂದೇ ಸಂಸ್ಕೃತಿಯ ಜನರೊಡನೆ ಬಾಳು ವುದರಿಂದ ಅದೇ ರೂಢಿಯಾಗಿರುತ್ತದೆ. ಹೊಸ ಸಂಸ್ಕೃತಿಯನ್ನು ಎದುರಿಸಿದಾಗ ಪ್ರಾರಂಭದಲ್ಲಿ ಅವರೊಡನೆ ವ್ಯವಹರಿಸುವುದು ಕಷ್ಟವಾಗುತ್ತದೆ, ಹಿಂಜರಿಕೆ, ಸಂಕೋಚ ಇತ್ಯಾದಿಗಳಿರುತ್ತವೆ. ವಿವಿಧ ಸಂಸ್ಕೃತಿಯ ಜನರೊಡನೆ ಬೆರೆಯುತ್ತ ಹೋದಂತೆ ಈ ಅಡೆ ತಡೆ ಗಳೆಲ್ಲ ಹೊರಟುಹೋಗುತ್ತವೆ. ನಮ್ಮ ಸಂಸ್ಕೃತಿಯನ್ನು ಬಿಟ್ಟುಕೊಡದೆ ಇತರ ಸಂಸ್ಕೃತಿಯನ್ನು ಸ್ವೀಕರಿಸುವುದೊಂದು ದೊಡ್ಡ ಕಲೆ.

ಯಾವುದೇ ವ್ಯಕ್ತಿಯನ್ನಾಗಲಿ, ಅವನು ಯಾವುದೇ ಸಂಸ್ಕೃತಿ, ಧರ್ಮ ಅಥವಾ ಜನಾಂಕ್ಕೆ ಸೇರಿರಲಿ, ಅವನನ್ನು ಒಬ್ಬ ವ್ಯಕ್ತಿಯನ್ನಾಗಿ ನೋಡಬೇಕು—ಅವನು ಕ್ರೈಸ್ತ, ಮುಸ್ಲಿಂ ಅಥವಾ ಅಮೆರಿಕನ್, ಯೂರೋಪಿಯನ್ ಎಂದು ಮುಂತಾಗಿ ನೋಡದೆ ನನ್ನಂತೆಯೇ ಒಬ್ಬ ವ್ಯಕ್ತಿ ಎಂದು ಪರಿಗಣಿಸಬೇಕು. ಈ ರೀತಿ ಮಾನವೀಯ ದೃಷ್ಟಿಯನ್ನು ಹೊಂದಿದ್ದರೆ ಯಾರೊಡನೆಯೂ ಮುಕ್ತವಾಗಿ ವ್ಯವಹರಿಸಲು ಸಾಧ್ಯ. ಪ್ರತ್ಯೇಕತಾ ಮನೋಭಾವವನ್ನು ಬಿಟ್ಟು ಏಕತಾ ಮನೋಭಾವನ್ನು ಬೆಳೆಸಿಕೊಳ್ಳಬೇಕು. View yourself as a citizen of a worldwide community and act accordingly. — Epictetus.

(ಪ್ರಶ್ನೆಗಳು: ಶ್ರೀ ವಿನಯ್, ಮೈಸೂರು)